NOVEMBER 11, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಹೊಸ ದಿಲ್ಲಿಯ, ಕೆಂಪು ಕೋಟೆಯ,** ಮೆಟ್ರೋ ನಿಲ್ದಾಣದ ಮೊದಲ ದ್ವಾರದ ಬಳಿ ಸಂಭವಿಸಿದ, ಕಾರು ಸ್ಫೋಟದಿಂದ, 8 ಜನ ಸಾವಿಗೀಡಾಗಿ, 25ಕ್ಕೂ ಹೆಚ್ಚು ಜನ ಗಾಯಗೊಂಡ ದುರ್ಘಟನೆ, ನೋವಿನ ಜೊತೆಗೆ, ದಿಗ್ಭ್ರಮೆ ಉಂಟುಮಾಡಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರತಿಕ್ರಿಯಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಿ, ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು, ಹಾರೈಸಿದ್ದಾರೆ. ಹೊಸ ದಿಲ್ಲಿಯ ಸ್ಫೋಟ ಪ್ರಕರಣದ ಹಿನ್ನೆಲೆ, ರಾಜ್ಯದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ, ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗುತ್ತಿದ್ದು, ಸಾರ್ವಜನಿಕರು ಕೂಡ, ಪೊಲೀಸ್ ಇಲಾಖೆ ಜೊತೆ ಸಹಕರಿಸಬೇಕು ಎಂದು, ಮುಖ್ಯಮಂತ್ರಿ ಮನವಿ ಮಾಡಿದ್ದಾರೆ.

<><><>

**ಹೊಸ ದಿಲ್ಲಿಯ ಪೊಲೀಸ್** ಆಯುಕ್ತ, ಸತೀಶ ಗೊಲ್ಚಾ, ಕಾರು ಸ್ಫೋಟದ ಘಟನೆ ಕುರಿತು, ಮಾಧ್ಯಮಗಳಿಗೆ ಮಾಹಿತಿ ನೀಡಿ, ಕೆಂಪು ಕೋಟೆಯ, ಮೆಟ್ರೋ ರೈಲು ನಿಲ್ದಾಣದ ಬಳಿ, ನಿನ್ನೆ ಸಂಜೆ 6.52ರ ಸುಮಾರಿಗೆ, ಸಂಚಾರ ದೀಪ ನಿಲುಗಡೆಯಾದ ಸಂದರ್ಭದಲ್ಲಿ, ನಿಧಾನವಾಗಿ ಚಲಿಸುತ್ತಿದ್ದ ಕಾರೊಂದರಲ್ಲಿ, ಸ್ಫೋಟ ಸಂಭವಿಸಿದೆ. ತನಿಖೆ ಮುಂದುವರೆದಿದೆ, ಎಂದರು.

<><><>

**ವಿಶ್ವ ಪ್ರಜ್ಞೆಯ ಹರಿಕಾರರಾಗಿ,** 'ವಿಶ್ವ ಮಾನವ' ತತ್ವಕ್ಕೆ ಏರಿದ, ಯುಗದ ಕವಿ, ಜ್ಞಾನಪೀಠ ಪುರಸ್ಕೃತ, ರಾಷ್ಟ್ರಕವಿ ಶ್ರೀ ಕುವೆಂಪು ಅವರ, ಪುಣ್ಯಸ್ಮರಣೆ ಇಂದು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಎಕ್ಸ್ ಮಾಧ್ಯಮದಲ್ಲಿ, ಗೌರವ ಪೂರ್ವಕ ನಮನ ಸಲ್ಲಿಸುತ್ತಿರುವುದಾಗಿ, ತಿಳಿಸಿದ್ದಾರೆ. ತಮ್ಮ ಸಾಹಿತ್ಯ ಕೃಷಿಯ ಮೂಲಕ, ಜಾತೀಯತೆ, ಅಸಮಾನತೆ ಮೊದಲಾದ ಸಾಮಾಜಿಕ ಸಮಸ್ಯೆಗಳ ನಿವಾರಣೆಗೆ ಶ್ರಮಿಸಿದ್ದ, ಕುವೆಂಪು ಅವರ ಆಲೋಚನೆ ಮತ್ತು ಸಾಹಿತ್ಯ, ಸದಾ ಸ್ಫೂರ್ತಿಯ ಸೆಲೆ, ಎಂದಿದ್ದಾರೆ.

<><><>

**'ಪೂಜ್ಯ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ** ಆಶೀರ್ವಾದದೊಂದಿಗೆ, ಸ್ವಚ್ಛ, ಸುಂದರ, ಹಸಿರು ವಿಜಯಪುರಕ್ಕಾಗಿ, ಓಡಿ' ಎಂಬ ಘೋ ' ವಾಕ್ಯದೊಂದಿಗೆ, ಡಿಸೆಂಬರ್ 7 ರಂದು, ಭಾನುವಾರ, ವೃಕ್ಷಥಾನ್ ಹೆರಿಟೇಜ್ ರನ್ ಆಯೋಜಿಸಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ, ಎಂ.ಬಿ. ಪಾಟೀಲ ತಿಳಿಸಿದ್ದಾರೆ. 5, 10, ಹಾಗೂ 21 ಕಿಲೋ ಮೀಟರ್ ಮ್ಯಾರಥಾನ್ ಓಟಗಳಿದ್ದು, ದೇಶ– ವಿದೇಶಗಳಿಂದಲೂ, 10 ಸಾವಿರಕ್ಕೂ ಅಧಿಕ ಓಟಗಾರರು ಪಾಲ್ಗೊಳ್ಳಲಿದ್ದಾರೆ, ಎಂದರು. ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ, ಹಸಿರು ಅಭಿಯಾನ ಕಾರ್ಯದಲ್ಲಿ, ಮಹತ್ತರ ಪಾತ್ರವಹಿಸುತ್ತಿರುವ ಸಾಧಕರಿಗೆ ಸನ್ಮಾನ ಹಾಗೂ, 10 ಲಕ್ಷ ರೂಪಾಯಿಗೂ ಹೆಚ್ಚಿನ ಬಹುಮಾನವಿದೆ, ಎಂದರು.

<><><>

**ರಾಜ್ಯದ ಗ್ರಾಮ ಪಂಚಾಯಿತಿಗಳ ನಡುವೆ,** ಆರೋಗ್ಯಕರ ಸ್ಪರ್ಧೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಉತ್ತೇಜಿಸಲು, ಗಾಂಧಿ ಗ್ರಾಮ ಪುರಸ್ಕಾರದ ಮೂಲಕ, ನೀಡಲಾಗುವ ಪ್ರೋತ್ಸಾಹ ಧನದ ಮೊತ್ತವನ್ನು, ಹೆಚ್ಚಿಸಲಾಗಿದೆ. ಪಂಚಾಯಿತಿ ಆಡಳಿತವನ್ನು ಬಲಪಡಿಸುವ ನಿಟ್ಟಿನಲ್ಲಿ, ಇದು ಗಮನಾರ್ಹ ನಿರ್ಧಾರ ಎಂದು, ಗ್ರಾಮೀಣಾಭಿವೃದ್ಧಿ ಇಲಾಖೆ ತಿಳಿಸಿದೆ.

<><><>

**ಹಿಂಸೆ, ಕಿರುಕುಳ, ದೌರ್ಜನ್ಯ ಅಥವಾ** ಸೈಬರ್ ಅಪರಾಧಗಳಿಗೆ ಬಲಿಯಾಗಿದ್ದರೆ, ರಾಷ್ಟ್ರೀಯ ಮಹಿಳಾ ಆಯೋಗದ ಸಹಾಯವಾಣಿ ಸಂಖ್ಯೆ, 7827–170–170ಗೆ ಕರೆ ಮಾಡಿ, ಡಿಜಿಟಲ್ ದೂರು ದಾಖಲೆಯ ಮೂಲಕ, ಸಹಾಯ ಪಡೆಯಬಹುದು ಎಂದು, ಕೇಂದ್ರ ವಾರ್ತಾ ಶಾಖೆಯ, ಬೆಂಗಳೂರು ಕಚೇರಿ ತಿಳಿಸಿದೆ.

<><><>

**ಪ್ರಧಾನಮಂತ್ರಿ ಬೀದಿ ವ್ಯಾಪಾರಿಗಳ,** ಆತ್ಮ ನಿರ್ಭರ್ ನಿಧಿ – ಪಿ.ಎಂ. ಸ್ವ ನಿಧಿ ಎರಡನೇ ಆವೃತ್ತಿ ಯೋಜನೆಯ, ವಿಸ್ತರಣೆಯಾಗಿದ್ದು, ಅರ್ಹ ಬೀದಿ ಬದಿ ವ್ಯಾಪಾರಿಗಳು ಹಾಗೂ ಸಣ್ಣ ಪುಟ್ಟ ವ್ಯಾಪಾರಸ್ಥರಿಂದ, ಅರ್ಜಿ ಆಹ್ವಾನಿಸಲಾಗಿದೆ ಎಂದು, ಕಲಬುರಗಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ, ಮುನಾವರ್ ದೌಲಾ ತಿಳಿಸಿದ್ದಾರೆ. ಹೊಸ ದಿಲ್ಲಿಯ, ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ, ಬೀದಿ ಬದಿ ವ್ಯಾಪಾರಸ್ಥರಿಗೆ, ಪ್ರಧಾನಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮ ನಿರ್ಭರ ಯೋಜನೆ ಅನುಷ್ಠಾನಗೊಳಿಸಿದೆ. ಕಲಬುರಗಿ ಜಿಲ್ಲೆಯ, ಎಲ್ಲಾ 12 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಯೋಜನೆಯನ್ನು ಅನು ತ್ಠಾನಗೊಳಿಸಲಾಗುತ್ತಿದೆ.

<><><>

**ಹೈದರಾಲಿ ಸೈನ್ಯದ ಆಕ್ರಮಣವನ್ನು,** ಏಕಾಂಗಿಯಾಗಿ ಎದುರಿಸಿ, ವೀರಾವೇಶದಿಂದ ಹೋರಾಡಿ, ಅಮರಳಾದ, ಕೋಟೆ ನಾಡು ಚಿತ್ರದುರ್ಗದ, ವೀರ ವನಿತೆ ಒನಕೆ ಓಬವ್ವ ಅವರ ಧೈರ್ಯ, ಸಾಹಸ, ಸಮಯ ಪ್ರಜ್ಞೆ, ನಾಡಿನ ಎಲ್ಲ ಮಹಿಳೆಯರಿಗೆ ಸಾರ್ವಕಾಲಿಕ ಸ್ಫೂರ್ತಿಯಾಗಿದೆ ಎಂದು, ವಿಧಾನಸಭೆ ವಿಪಕ್ಷ ನಾಯಕ, ಆರ್. ಅಶೋಕ ತಿಳಿಸಿದ್ದಾರೆ. ಕರುನಾಡಿನ ಶೌರ್ಯ, ಪರಾಕ್ರಮ, ಸ್ವಾಭಿಮಾನದ ಪ್ರತೀಕವಾದ, ಒನಕೆ ಓಬವ್ವ ಅವರ ಜಯಂತಿಯಂದು, ವೀರನಾರಿಗೆ ಗೌರವದ ನಮನಗಳನ್ನು, ಸಲ್ಲಿಸಿದ್ದಾರೆ.

<><><>

**ಭಾರತದ ಖ್ಯಾತ ಪಕ್ಷಿ ತಜ್ಞ, ಪದ್ಮವಿಭೂಷಣ** ಡಾಕ್ಟರ್ ಸಲೀಂ ಮೋಯಿಜುದ್ದೀನ್ ಅಬ್ದುಲ್ ಅಲಿ, ಅವರ 129ನೇ ಜನ್ಮ ದಿನಾಚರಣೆ ಪ್ರಯುಕ್ತ, ಧಾರವಾಡದ ನೇಚರ್ ರಿಸರ್ಚ್ ಸೆಂಟರ್, ನಾಳೆ ಬೆಳಗ್ಗೆ 6 ಗಂಟೆಗೆ, ಕರ್ನಾಟಕ ವಿಶ್ವವಿದ್ಯಾಲಯದ, ಸಸ್ಯೋದ್ಯಾನದಲ್ಲಿ ಪಕ್ಷಿ ವೀಕ್ಷಣೆ ಹಾಗೂ ಗಣತಿ ಆಯೋಜಿಸಿದೆ. 50ಕ್ಕೂ ಹೆಚ್ಚು ಜನ ಪರಿಸರಾಸಕ್ತರು ಪಾಲ್ಗೊಳ್ಳಲಿದ್ದಾರೆ. ಮುಂಬೈಯಿಯ, ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸಾಯಿಟಿ ಸಹಯೋಗದಲ್ಲಿ, ಆಯೋಜಿತ ಪಕ್ಷಿಗಳ ವೀಕ್ಷಣೆ ಹಾಗೂ ದಾಖಲೀಕರಣವನ್ನು, ಜನ ವಿಜ್ಞಾನದ ಭಾಗವಾಗಿ, ಜನ ವಿಜ್ಞಾನಿಗಳು ದಾಖಲಿಸಿದ್ದಾರೆ ಎಂದು, ಎನ್.ಆರ್.ಸಿ. ಸಂಸ್ಥಾಪಕ ಅಧ್ಯಕ್ಷ ಪಿ.ವಿ. ಹಿರೇಮಠ ತಿಳಿಸಿದ್ದಾರೆ.

<><><>

**ಉತ್ತರಕನ್ನಡ ಜಿಲ್ಲೆಯಲ್ಲಿ,** ಅಕ್ಟೋಬರ್ ತಿಂಗಳಾಂತ್ಯದ ವರೆಗೆ, ಕೊಟ್ಪಾ ಕಾನೂನಿನಡಿ, 657 ಪ್ರಕರಣ ದಾಖಲಿಸಿ, 88 ಸಾವಿರದ 900 ರೂಪಾಯಿ ದಂಡ ವಿಧಿಸಲಾಗಿದೆ. ಎಂದು ಜಿಲ್ಲಾಧಿಕಾರಿ ಲಕ್ಷ್ಮೀ ಪ್ರಿಯಾ ತಿಳಿಸಿದ್ದಾರೆ. ಕಾರವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಆರೋಗ್ಯ ಇಲಾಖೆಯ, ವಿವಿಧ ಸಮಿತಿಗಳ ಸಭೆಯ, ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**